ಸ್ ೧೯೦೨—೧೯೦೩ನೇ ಇಸವಿ ವಿ|| ನಂಬರ್ 418.

ಮೃತಪಟ್ಟ ಶ್ರೀಕಂಠೈಯ್ಯನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಮೈಸೂರು ದೇವರಾಜ ಮೊಹಲ್ಲಾ ಆಸ್ಪತ್ರೆ ಬಳೀಇರುವ ಶಿಂಗಾರಮ್ಮ, ಮೃತಪಟ್ಟ ಸದರೀ ಶ್ರೀಕಂಠೈಯ್ಯನಿಗೆ ಕೂಡವಳಿ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರಲ್ಲಿ ವಾಸಸ್ಥರಾಗಿ ಮೃತಪಟ್ಟ ಶ್ರೀಕಂಠೈಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸ್ ೧೯೦೧ನೇ ಇಸವಿ VIIನೇ ಆಕ್ಟ್ಪು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶಿಂಗಾರಮ್ಮನ ಅರ್ಜಿಯನ್ನು ಸ್ ೧೯೦೩ನೇ ಇಸವಿ ಏಪ್ರೆಲ್ ತಿಂಗಳು ತಾರೀಖು 7ರಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶ್ರೀಕಂಠೈಯ್ಯನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ ೧೯೦೩ನೇ ಇಸವಿ ಮಾರ್ಚಿ ತಿಂಗಳು 12ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸ್ ೧೯೦೨–೧೯೦೩ನೇ ಇಸವಿ ವಿ|| ಅರ್ಜಿ ನಂಬರ್ 419.

ಮೃತಪಟ್ಟ ಮಧ್ವರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಕೋಟೆಲಿರುವ ತಿರುಸಂದ್ರದ ಶೇಷಗಿರಿರಾಯರ ಮಕ್ಕಳು ನಾರಾಯಣರಾಯರು, ಮೃತಪಟ್ಟ ಸದರೀ ಮಧ್ವರಾಯರಿಗೆ ಅವಿಭಕ್ತ ಸಹೋದರ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರಲ್ಲಿ ವಾಸಸ್ಥರಾಗಿ ಮೃತಪಟ್ಟ ಮಧ್ವರಾಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೯೦೧ನೇ ಇಸವಿ VIIನೇ ಆಕ್ಟ್ಪು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನಾರಾಯಣರಾಯರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಏಪ್ರೆಲ್ ತಾರೀಖು 6ರಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮಧ್ವರಾಯರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ ೧೯೦೩ನೇ ಇಸವಿ ಮಾರ್ಚಿ ತಾರೀಖು 12ರಲ್ಲಿ ಕೋರ್ಟು ಮೊಹರ್ ನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಸ್. ವರದರಾಜಯ್ಯಂಗಾರ್, ಸಬ್ ಜಡ್ಜ್.

ನೋಟಿಸ್.

ಸಿವಿಲ್ ಪ್ರೊಸೀಡರು ಕೋಡು 30ನೇ ಸೆಕ್ಷನ್ಮೇರೆ.

ಮೈಸೂರು ಪ್ರಿನ್ಸಿಪಲ್ ಮುನ್ಸೀಫ್ ಕೋರ್ಟಿನಲ್ಲಿ.

೧೯೦೨—೧೯೦೩ನೇ ಇಸವಿ ಸಿವಿಲ್ ವ್ಯಾಜ್ಯದ ನಂಬರು 125.

ವಾದಿ.	ಪ್ರತಿವಾದಿ.
ಮೈಸೂರು ಮಂಡಿ ಮೊಹಲ್ಲಾ ನಕ್ಷೆಬಂದು ಬೀದೀಲಿ ಇರುವ ವ್ಯಾಪಾರ ಕಸಬಿನ ಕರಿಯಂಣಾ.	1ನೇ ಮೈಸೂರು ಮಂಡಿ ಮೊಹಲ್ಲಾ ನಕ್ಷೆಬಂದು ಬೀದೀಲಿ ಇರುವ ನೆಕ್ಕದ ಅಂಗಡೀ ದಾವೂದುಸಾಬಿ. 2ನೇ ಸದರೀ ಸ್ಥಳದಲ್ಲಿ ಇರುವ ಅಕ್ಕಿ ಅಂಗಡಿ ಬುರ್ಡಸಾಬಿ. 3ನೇ ಸದರೀ ಸ್ಥಳದಲ್ಲಿ ಇರುವ ನೆಕ್ಕದ ಅಂಗಡಿ ದಾದೂಮಿಯ್ಯಾ.

ಇದರಿಂದ ಮೈಸೂರು ಮಂಡಿ ಮೊಹಲ್ಲಾ ನಕ್ಷೆಬಂದು ಬೀದಿಯಲ್ಲಿ ಇರುವ ಮುಸಲ್ಮಾನರ ಜಾತಿ ಜನಗಳಿಗೆ ತಿಳಿಯಪಡಿಸುವದೇನಂದರೆ, ಬೆಳ್ಳಂಡೆ ಸಿವಿಲ್ ನಂಬರಿನಲ್ಲಿ ಈ ಕೆಳಗೆ ವಿವರಿಸುವ ಷೆಡ್ಯೂಲಿನಲ್ಲಿ ಕಂಡ ಮನೆಗೆ ವಾದಿಯು ದಾವಾ ತಂದು ಇರುವದ್ದರಿಂದ ಈ ದಾವಾಕ್ಕೆ ಕಕ್ಷಿಗಾರರಾಗಿ ಶೇರತಕ್ಕ ಇಷ್ಟವುಳ್ಳವರು ೧೯೦೩ನೇ ಇಸವಿ ಮೊರ್ಚಿ ತಿಂಗಳು 18ನೇ ತಾರೀಖು ಬುಧವಾರ ದಿವಿ 11 ಘಂಟೆಗೆ ಈ ಕೋರ್ಟು ರೂಬರೂಬು ಹಾಜರಾಗಿ ತನ್ಮತಮ್ಮ ಹಕ್ಕು ಬಾಧ್ಯತೆಯನ್ನು ಸ್ಥಾಪಿಸಿಕೊಳ್ಳತಕ್ಕದ್ದಿಧೆ.

ಬ ತಾರೀಖು 28ನೇ ಫೆಬ್ರವರಿ 1903ನೇ ಇಸವಿ.

ಷೆಡ್ಯೂಲ್.

ಮೈಸೂರು ಮಂಡಿ ಮೊಹಲ್ಲಾ ನಕ್ಷೆಬಂದು ಬೀದಿಯಲ್ಲಿ ಇರುವ ಪೂರ್ವಕ್ಕೆ—ರತ್ನಶಿಂಗಯವರ ಅಂಗಡಿ ಮತ್ತು ಮಾಯಂಣನ ಮನೆ. ಪಶ್ಚಿಮಕ್ಕೆ—ಕರಿಯಂಣನ ಅಂಗಡೀ ಹಿತ್ತಲೂ ಸಹ. ದಕ್ಷಿಣಕ್ಕೆ—ರೋಡು. ಉತ್ತರಕ್ಕೆ—ಗರಡೀ ಪಾಳುಜಾಗಾ ಈ ಮಧ್ಯೆ ಇರುವ ಮೊಟ್ಟೆ ಮನೆ. ಪೂರ್ವಪಶ್ಚಿಮ ಗಜಾ 5½, ದಕ್ಷಿಣೋತ್ತರ ಗಜಾ 7 ಅಡಿ 2 ಗೋಡೆ ಸಹಾ ವುಳ್ಳದ್ದು ಮತ್ತು ಇದಕ್ಕೆ ಸಂಬಂಧಪಟ್ಟ ಚರಸ್ವತ್ತು ಸಹಾ.

ಆನಂದರಾವ್ ಸಿರಸಿ,
ಪ್ರಿನ್ಸಿಪಲ್ ಮುನ್ಸೀಫ್.

ಗೌರ್ನಮೆಂಟ್ ಸೆಕ್ಯುರಿಟಿ ಬುಕ್ ಡಿಪೋ.

ನೋಟಿಸ್. ಬೆಂಗಳೂರು, ತಾರೀಖು 7ನೇ ಫೆಬ್ರವರಿ 1903.

1903ನೇ ಇಸವಿ ಲೋವರ್ ಸೆಕಂಡರೀ ಪರೀಕ್ಷೆಗೆ ನೇಮಕವಾಗಿರುವ ಹೊಸ ಪದ್ಯಸಾರವು (Iನೇ ಭಾಗ) ಬೆಂಗಳೂರ್ ಗೌರ್ನಮೆಂಟ್ ಸೆಂಟ್ರಲ್ ಬುಕ್ಡಿಪೋವಿನಲ್ಲಿ ಬಿಕರಿಗೆ ಸಿದ್ಧವಾಗಿರುತ್ತೆ. ಅವರ ಖರೀದಿ ಪ್ರತಿ 1ಕ್ಕೆ 5 ಆಣೆಗಳು.

ಎಸ್. ಅಬ್ದುಲ್ ಹೈ, ಕ್ಯೂರೇಟರ್.